**KAMS610010652023**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು  ಪ್ರಥಮ  ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ., ಪಿರಿಯಾಪಟ್ಟಣ.**

**-: ಉಪಸ್ಥಿತರು :-**

ಶ್ರೀ ಯೋಗೇಶ ಎಂ.ಆರ್., ಬಿ.ಎ.ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.,
ಪಿರಿಯಾಪಟ್ಟಣ.

ದಿನಾಂಕ 08 ನೇ ಏಪ್ರಿಲ್ 2026.

**ಕ್ರಿಮಿನಲ್ ಪ್ರಕರಣ ಸಂಖ್ಯೆಃ 307/2023**

ಪಿರ್ಯಾದಿದಾರರು: ರಾಜ್ಯದ ಪರ ಪಿರಿಯಾಪಟ್ಟಣ ಠಾಣಾ ಆರಕ್ಷಕರು
( ಸಹಾಯಕ ಸರ್ಕಾರಿ ಅಭಿಯೋಜಕರವರಿಂದ )

**ವಿರುದ್ಧ**

ಆರೋಪಿಗಳು :

**1.** ರವಿಕುಮಾರ್ ಕೆ.ಎಂ,
ವಯಸ್ಸು 27 ವರ್ಷ,
ಬಿನ್ ಮೂರ್ತಿ ಜೆ,

**2.** ಮೂರ್ತಿ ಜೆ,
ವಯಸ್ಸು 48 ವರ್ಷ,
ಬಿನ್ ಲೇ.ಜವರಶೆಟ್ಟಿ,

**3.** ನಾಗಮ್ಮ ಟಿ.ಎಸ್ ಉಃ ರತ್ನಮ್ಮ,
ವಯಸ್ಸು 46 ವರ್ಷ,
ಬಿನ್ ಮೂರ್ತಿ ಜೆ,

ಆರೋಪಿಗಳ ವಾಸಃ
ಕಿರನೆಲ್ಲಿ,
ರಾವಂದೂರು ಹೋಬಳಿ,
ಪಿರಿಯಾಪಟ್ಟಣ ತಾಲ್ಲೂಕು.

*(ಆರೋಪಿಗಳ ಪರವಾಗಿ ಶ್ರೀ **ಐ.ಆರ್.ಎಸ್.,** ವಕೀಲರು )*

| | | | |
|---|---|---|---|
| 1. | ಕೃತ್ಯ ನಡೆದ ದಿನಾಂಕ | : | 19.06.2022 |
| 2. | ಕೃತ್ಯ ವರದಿ ಮಾಡಿದ ದಿನಾಂಕ | : | 22.12.2022 |
| 3. | ದೂರುದಾರರ ಹೆಸರು | : | ಭಾಗ್ಯ ಬಿ.ಎಸ್ |
| 4. | ಸಾಕ್ಷಿದಾರರ ಹೇಳಿಕೆಯ ದಿನಾಂಕ | : | 17.03.2026 |
| 5. | ಸಾಕ್ಷಿದಾರರ ಹೇಳಿಕೆಯು ಮುಕ್ತಾಯವಾದ ದಿನಾಂಕ | : | 17.03.2026 |
| 6. | ಆಪಾದಿಸಲಾದ ಕಲಂಗಳು | : | ಭಾರತ ದಂಡ ಸಂಹಿತೆ ಕಲಂ.504, 498(ಎ), 506, 323 ಮತ್ತು 354(ಸಿ) ಸಹವಾಚಕ 34. |
| 7. | ನ್ಯಾಯಾಲಯದ ತೀರ್ಮಾನ | : | ನಿರ್ದೋಷಿಗಳು. |

Digitally signed by YOGESH M R
Location: PRL.CIVIL JUDGE AND JMFC., PERIYAPATNA.
**( ಯೋಗೇಶ ಎಂ.ಆರ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಪಿರಿಯಾಪಟ್ಟಣ.

**-: ತೀರ್ಪು :-**

ಪಿರಿಯಾಪಟ್ಟಣ ಪೊಲೀಸ್ ಠಾಣಾಧಿಕಾರಿಗಳು, ಆರೋಪಿಗಳ ವಿರುದ್ಧ ಭಾರತ ದಂಡ ಸಂಹಿತೆ ಕಲಂ.504, 498(ಎ), 506, 323 ಮತ್ತು 354(ಸಿ) ಸಹವಾಚಕ 34 ರಡಿಯಲ್ಲಿ ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತಾರೆ.

2. **<u>ಮಾನ್ಯ ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿರುತ್ತಿದೆ</u>** :-

1 ನೇ ಆರೋಪಿಯು ಚಾಸಾ.1 ಬಿ.ಎಸ್.ಭಾಗ್ಯ ರವರನ್ನು ದಿನಾಂಕ 31.03.2021 ರಂದು ಭುವನಹಳ್ಳಿಯ ನಾಗವೇಣಿಯ ಮನೆಯ ಬಳಿ ಮದುವೆ ಮಾಡಿ ಕೊಟ್ಟಿದ್ದು, ಮದುವೆಯಾದ 06 ತಿಂಗಳವರೆಗೆ ಚಾಸಾ.1 ಬಿ.ಎಸ್.ಭಾಗ್ಯ ರವರನ್ನು ಆರೋಪಿಗಳು ಚೆನ್ನಾಗಿ ನೋಡಿಕೊಂಡಿದ್ದು, ನಂತರದ ದಿನಗಳಲ್ಲಿ ಸಣ್ಣಪುಟ್ಟ ವಿಚಾರವಾಗಿ ಚಾಸಾ.1 ಬಿ.ಎಸ್.ಭಾಗ್ಯ ರವರಿಗೆ ಬಾಯಿಗೆ ಬಂದಂತೆ ಬೇರ್ವಸಿ ಮುಂಡೇ, ನಾಯಿ ಮುಂಡೇ ನೀನು ಎಲ್ಲಿದ್ದಿಯೋ ನಮಗೆ ಗಂಟಾಕಿ ಕೊಂಡೇ ಎಂದು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿರುತ್ತಾರೆ. ನಂತರ ಆರೋಪಿಗಳು ಚಾಸಾ.1 ಬಿ.ಎಸ್.ಭಾಗ್ಯ ರವರಿಗೆ ಮನೆಯಿಂದ ಆಸ್ತಿಯನ್ನು ತರುವಂತೆ ಮಾನಸಿಕವಾಗಿ ಹಿಂಸೆಯನ್ನು ನೀಡುತ್ತಿದ್ದು, ಚಾಸಾ.1 ಬಿ.ಎಸ್.ಭಾಗ್ಯ ರವರಿಗೆ ಮನೆಯಲ್ಲಿ ಊಟ, ತಿಂಡಿಯನ್ನು ಮಾಡಲು ಬಿಡದೇ, ಮನೆ ಬಾಡಿಗೆ ಕೊಟ್ಟು ಇರು ಎಂದು ವಾಶ್ ರೂಮ್, ಟೈಲೇಟ್ ರೂಮ್ ಸಹ ಹೋಗಲು ಬಿಡದೇ ನೂರು ರೂಪಾಯಿ ಹಣ ಕೊಟ್ಟು ಹೋಗು ಎಂದು ಹಿಂಸೆ ನೀಡಿರುತ್ತಾರೆ.

ನಂತರ 2022 ರ ಮಾರ್ಚಿ ತಿಂಗಳಲ್ಲಿ ಆರೋಪಿಗಳು ಚಾಸಾ.1 ಬಿ.ಎಸ್.ಭಾಗ್ಯ ರವರಿಗೆ ಅವರ ತಾಯಿ ಮನೆಯಿಂದ ಆಸ್ತಿ ಬರೆಸಿಕೊಂಡು ಬಂದರೆ ಮಾತ್ರ ನಮ್ಮ ಆಸ್ತಿ ಮತ್ತು ಹಣಕಾಸನ್ನು ನಿನಗೆ ಕೊಡುತ್ತೇವೆ

ಇಲ್ಲವಾದರೇ ನಮ್ಮ ಮನೆ ಆಸ್ತಿಯಲ್ಲಿ ಏನು ಕೊಡುವುದಿಲ್ಲವೆಂದು ಹೇಳಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆಯನ್ನು ನೀಡಿರುತ್ತಾರೆ. ದಿನಾಂಕ 19.06.2022 ರಂದು 1 ನೇ ಆರೋಪಿಯು 2 ಮತ್ತು 3 ನೇ ಆರೋಪಿಗಳ ಮಾತುಗಳನ್ನು ಕೇಳಿಕೊಂಡು ಚಾಸಾ.1 ಬಿ.ಎಸ್.ಭಾಗ್ಯ ರವರಿಗೆ ಅವರ ತಾಯಿ ಮನೆಯಿಂದ ಆಸ್ತಿ ಬರೆಸಿಕೊಂಡು ತರದೇ ಹೋದರೇ, ಚಾಸಾ.1 ಬಿ.ಎಸ್.ಭಾಗ್ಯ ರವರನ್ನು ಸಾಯಿಸುವುದಾಗಿ ಪ್ರಾಣಾ ಬೆದರಿಕೆ ಹಾಕಿದ್ದು, 1 ನೇ ಆರೋಪಿಯು ತಮ್ಮ ಕೈಗಳಿಂದ ಚಾಸಾ.1 ಬಿ.ಎಸ್.ಭಾಗ್ಯ ರವರ ಎದೆಗೆ ಹಾಗೂ ಹಣೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ, ಚಾಸಾ.1 ರವರಿಗೆ ವಿಚ್ಛೇದನೆ ಕೊಟ್ಟು ಹೋಗು ಎಂದು ಅವರ ತಾಳಿಯನ್ನು ಕಿತ್ತು ಹಾಕಿ ಅವರನ್ನು ಮನೆಯಿಂದ ಆಚೆಗೆ ದಬ್ಬಿರುತ್ತಾರೆ. 2 ನೇ ಆರೋಪಿಯು ಚಾಸಾ.1 ಬಿ.ಎಸ್.ಭಾಗ್ಯ ರವರು ಮನೆಯಲ್ಲಿ ಸ್ನಾನ ಮಾಡುವಾಗ ಬಟ್ಟೆ ಬದಲಾಯಿಸುವುದನ್ನು ಕದ್ದು ಮುಚ್ಚಿ ನೋಡಿರುತ್ತಾರೆಂದು ಆರೋಪಿಗಳ ವಿರುದ್ಧ ಪಿರಿಯಾಪಟ್ಟಣ ಠಾಣಾ ಆರಕ್ಷಕರು ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತಾರೆ.

**3.** ಪಿರಿಯಾಪಟ್ಟಣ ಠಾಣಾಧಿಕಾರಿಗಳು, ಚಾಸಾ.10 ಮಹಾದೇವ ರವರು, ಠಾಣಾ ಉಸ್ತುವಾರಿಯಲ್ಲಿದ್ದಾಗ, ಚಾಸಾ.1 ಭಾಗ್ಯ ಬಿ.ಎಸ್ ರವರು ನೀಡಿದ ದೂರನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂಖ್ಯೆಃ357/2022 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತಾರೆ. ನಂತರ

ಸಾಕ್ಷಿದಾರರ ಹೇಳಿಕೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ಪಡೆದು ತನಿಖೆಯನ್ನು ಪೂರ್ಣಗೊಳಿಸಿ, ನ್ಯಾಯಾಲಯಕ್ಕೆ ಆರೋಪಿಗಳ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

**4.** ತನಿಖಾಧಿಕಾರಿಯು ಅಂತಿಮ ವರದಿಯನ್ನು ಸಲ್ಲಿಸಿದ ನಂತರ, ನ್ಯಾಯಾಲಯವು ಪ್ರಕರಣದಲ್ಲಿ ಆರೋಪಿಗಳ ವಿರುದ್ಧ ಮೇಲ್ಕಂಡ ಕಲಂಗಳ ಅಡಿಗಳಲ್ಲಿ ಸಂಜ್ಞಾನವನ್ನು ತೆಗೆದುಕೊಂಡಿರುತ್ತದೆ.

**5.** ಆರೋಪಿಗಳು ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ.207ರ ಅನ್ವಯ, ಅವರಿಗೆ ಅಂತಿಮ ವರದಿಯ ಪ್ರತಿಯನ್ನು ನೀಡಲಾಗಿದೆ. ದೋಷಾರೋಪಣೆಯನ್ನು ರಚಿಸುವ ಪೂರ್ವದಲ್ಲಿ ವಾದವನ್ನು ಆಲಿಸಿ, ನಂತರ ಭಾರತ ದಂಡ ಸಂಹಿತೆ ಕಲಂ.504, 498(ಎ), 506, 323 ಮತ್ತು 354(ಸಿ) ಸಹವಾಚಕ 34 ರಡಿಗಳಲ್ಲಿ ಶಿಕ್ಷಿಸಬಹುದಾದ ದೋಷಾರೋಪಣೆಯನ್ನು ರಚಿಸಿ, ಆರೋಪಿಗಳಿಗೆ ಓದಿ ಹೇಳಲಾಯಿತು. ಆರೋಪಿಗಳು ತಪ್ಪನ್ನು ಒಪ್ಪಿಕೊಳ್ಳದೇ ವಿಚಾರಣೆಯಾಗಬೇಕೆಂದು ಕೇಳಿಕೊಂಡಿರುತ್ತಾರೆ.

**6.** ಆರೋಪಿಗಳ ವಿರುದ್ಧ ಮಾಡಿರುವ ದೋಷಾರೋಪಣೆಯನ್ನು ಸಾಭೀತುಪಡಿಸುವ ಉದ್ದೇಶದಿಂದ, ಮಾನ್ಯ ಅಭಿಯೋಜನೆಯು ತಮ್ಮ ಪರವಾಗಿ ಅಂತಿಮ ವರದಿಯಲ್ಲಿ

ನಮೂದಿಸಿರುವ 14 ಸಾಕ್ಷಿಗಳ ಪೈಕಿ, ದೂರುದಾರರಾದ ಚಾಸಾ.1 ಭಾಗ್ಯ ಬಿ.ಎಸ್ ರವರನ್ನು ಪ್ರಾಸಾ.1 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿ, ದಾಖಲೆಗಳನ್ನು ಮತ್ತು ಸಹಿಗಳನ್ನು ನಿಪಿ.1 ರಿಂದ 4 ರಂತೆ ಗುರುತಿಸಿಕೊಂಡು, ತಮ್ಮ ಪರ ಸಾಕ್ಷಿಗಳ ವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತದೆ. ನಂತರ ಮಾನ್ಯ ಅಭಿಯೋಜನೆಯ ಸಾಕ್ಷ್ಯದಲ್ಲಿ, ಆರೋಪಿಗಳಿಗೆ ವ್ಯತಿರಿಕ್ತವಾದ ಯಾವುದೇ ಸಂದರ್ಭಗಳು ಕಂಡುಬಾರದ ಕಾರಣ, ಆರೋಪಿಗಳನ್ನು ದಂ.ಪ್ರ.ಸಂ.ಕಲಂ.313 ರಡಿ ವಿಚಾರಣೆ ಮಾಡುವುದರಿಂದ ವಿನಾಯಿತಿ ನೀಡಲಾಗಿದೆ.

**7.** ಉಭಯ ಪಕ್ಷಗಾರರ ವಕೀಲರುಗಳ ವಾದ-ವಿವಾದಗಳನ್ನು ಆಲಿಸಿ ಮತ್ತು ಸಾಕ್ಷ್ಯಾಧಾರಗಳನ್ನು ಗಮನದಲ್ಲಿರಿಸಿಕೊಂಡು ಅವಲೋಕಿಸಿದಾಗ, ಈ ಪ್ರಕರಣದಲ್ಲಿ ನ್ಯಾಯಾಲಯದ ಪರಿಗಣನೆಗೆ ಉದ್ಭವಿಸುವ ಅಂಶಗಳು ಈ ಕೆಳಕಂಡಂತಿವೆ.

**ಅಂಶಗಳು**

**1.** 1 ನೇ ಆರೋಪಿಯು ಚಾಸಾ.1 ಬಿ.ಎಸ್.ಭಾಗ್ಯ ರವರನ್ನು ದಿನಾಂಕ 31.03.2021 ರಂದು ಭುವನಹಳ್ಳಿಯ ನಾಗವೇಣಿಯ ಮನೆಯ ಬಳಿ ಮದುವೆ ಮಾಡಿ ಕೊಟ್ಟಿದ್ದು, ಮದುವೆಯಾದ 06 ತಿಂಗಳವರೆಗೆ ಚಾಸಾ.1 ಬಿ.ಎಸ್.ಭಾಗ್ಯ ರವರನ್ನು ಆರೋಪಿಗಳು ಚೆನ್ನಾಗಿ ನೋಡಿಕೊಂಡಿದ್ದು, ನಂತರದ ದಿನಗಳಲ್ಲಿ ಸಣ್ಣಪುಟ್ಟ ವಿಚಾರವಾಗಿ ಚಾಸಾ.1 ಬಿ.ಎಸ್.ಭಾಗ್ಯ ರವರು ಕುಪಿತಗೊಂಡು ಸಾರ್ವಜನಿಕ ಶಾಂತಿ ಮತ್ತ ನೆಮ್ಮದಿಗೆ ಭಂಗವುಂಟು ಮಾಡಲಿ ಎಂಬ ಉದ್ದೇಶದಿಂದ ಅವರನ್ನು ಬಾಯಿಗೆ ಬಂದಂತೆ ಬೇರ್ವಸಿ ಮುಂಡೇ, ನಾಯಿ ಮುಂಡೇ

ನೀನು ಎಲ್ಲಿದ್ದಿಯೋ ನಮಗೆ ಗಂಟಾಕಿ ಕೊಂಡೇ ಎಂದು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿ, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.504 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**2.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 3 ನೇ ಆರೋಪಿಗಳು ಏಕೋದ್ದೇಶದಿಂದ ಚಾಸಾ.1 ಬಿ.ಎಸ್.ಭಾಗ್ಯ ರವರಿಗೆ ಮನೆಯಿಂದ ಆಸ್ತಿಯನ್ನು ತರುವಂತೆ ಮಾನಸಿಕವಾಗಿ ಹಿಂಸೆಯನ್ನು ನೀಡುತ್ತಿದ್ದು, ಚಾಸಾ.1 ಬಿ.ಎಸ್.ಭಾಗ್ಯ ರವರಿಗೆ ಮನೆಯಲ್ಲಿ ಊಟ, ತಿಂಡಿಯನ್ನು ಮಾಡಲು ಬಿಡದೇ, ಮನೆ ಬಾಡಿಗೆ ಕೊಟ್ಟು ಇರು ಎಂದು ವಾಶ್ ರೂಮ್, ಟೈಲೇಟ್ ರೂಮ್ ಸಹ ಹೋಗಲು ಬಿಡದೇ ನೂರು ರೂಪಾಯಿ ಹಣ ಕೊಟ್ಟು ಹೋಗು ಎಂದು ಹಿಂಸೆ ನೀಡಿದ್ದು ಹಾಗೂ 2022 ರ ಮಾರ್ಚ್ ತಿಂಗಳಲ್ಲಿ ಆರೋಪಿಗಳು ಚಾಸಾ.1 ಬಿ.ಎಸ್.ಭಾಗ್ಯ ರವರಿಗೆ ಅವರ ತಾಯಿ ಮನೆಯಿಂದ ಆಸ್ತಿ ಬರೆಸಿಕೊಂಡು ಬಂದರೆ ಮಾತ್ರ ನಮ್ಮ ಆಸ್ತಿ ಮತ್ತು ಹಣಕಾಸನ್ನು ನಿನಗೆ ಕೊಡುತ್ತೇವೆ ಇಲ್ಲವಾದರೇ ನಮ್ಮ ಮನೆ ಆಸ್ತಿಯಲ್ಲಿ ಏನು ಕೊಡುವುದಿಲ್ಲವೆಂದು ಹೇಳಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆಯನ್ನು ನೀಡಿದ್ದು, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.498(ಎ) ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**3.** ದಿನಾಂಕ 19.06.2022 ರಂದು 1 ನೇ ಆರೋಪಿಯು 2 ಮತ್ತು 3 ನೇ ಆರೋಪಿಗಳು ತಮ್ಮ ಮಾತುಗಳನ್ನು ಕೇಳಿಕೊಂಡು ಚಾಸಾ.1 ಬಿ.ಎಸ್.ಭಾಗ್ಯ ರವರಿಗೆ ಅವರ ತಾಯಿ ಮನೆಯಿಂದ ಆಸ್ತಿ ಬರೆಸಿಕೊಂಡು ತರದೇ ಬಂದರೇ

ಚಾಸಾ.1 ಬಿ.ಎಸ್.ಭಾಗ್ಯ ರವರನ್ನು ಸಾಯಿಸುವುದಾಗಿ ಪ್ರಾಣಾ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**4.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 3 ನೇ ಆರೋಪಿಗಳು ಏಕೋದ್ದೇಶದಿಂದ, ಅವರ ಪೈಕಿ 1 ನೇ ಆರೋಪಿಯು ತಮ್ಮ ಕೈಗಳಿಂದ ಚಾಸಾ.1 ಬಿ.ಎಸ್.ಭಾಗ್ಯ ರವರ ಎದೆಗೆ ಹಾಗೂ ಹಣೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ, ಚಾಸಾ.1 ರವರಿಗೆ ವಿಚ್ಛೇದನೆ ಕೊಟ್ಟು ಹೋಗು ಎಂದು ಅವರ ತಾಳಿಯನ್ನು ಕಿತ್ತು ಹಾಕಿ ಅವರನ್ನು ಮನೆಯಿಂದ ಆಚೆಗೆ ದಬ್ಬಿದ್ದು, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.323 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**5.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 2 ನೇ ಆರೋಪಿಯು ಚಾಸಾ.1 ಬಿ.ಎಸ್.ಭಾಗ್ಯ ರವರು ಮನೆಯಲ್ಲಿ ಸ್ನಾನ ಮಾಡುವಾಗ ಬಟ್ಟೆ ಬದಲಾಯಿಸುವಾಗ ಕದ್ದು ಮುಚ್ಚಿ ನೋಡುತ್ತಿದ್ದು, ಆ ಮೂಲಕ ಆರೋಪಿಗಳು ಭಾರತ ದಂಡ ಸಂಹಿತೆ ಕಲಂ.354(ಸಿ) ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

**6.** ಯಾವ ಆದೇಶ ?

**8.** ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಗಳು

ಅಂಶ-1 ರಿಂದ 5 : **"ನಕಾರಾತ್ಮಕವಾಗಿ"**

ಅಂಶ-6 : ಅಂತಿಮ ಆದೇಶದಂತೆ,

ಈ ಕೆಳಕಂಡ,

**ಕಾ ರ ಣ ಗ ಳು**

**ಅಂಶ-1 ರಿಂದ 5 :-**

**9.** ಈ ಎಲ್ಲ ಅಂಶಗಳು ಒಂದಕ್ಕೊಂದು ಪೂರಕವಾಗಿರುವ ಕಾರಣ, ಸಾಕ್ಷ್ಯದ ವಿಮರ್ಶೆಯ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಚರ್ಚಿಸಲು ಒಟ್ಟಿಗೆ ಪರಿಗಣಿಸಲಾಗಿದೆ.

**10.** ಮಾನ್ಯ ಅಭಿಯೋಜನೆಯು ತಮ್ಮ ದೋಷಾರೋಪಣೆಯನ್ನು ಸಾಭೀತುಪಡಿಸಲು ಈ ಪ್ರಕರಣದ ದೂರುದಾರರಾದ ಚಾಸಾ.1 ಭಾಗ್ಯ ಬಿ.ಎಸ್ ರವರನ್ನು ಪ್ರಾಸಾ.1 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ, 1 ನೇ ಆರೋಪಿ ತನ್ನ ಗಂಡ. 2 ನೇ ಆರೋಪಿ ತನ್ನ ಮಾವ ಹಾಗೂ 3 ನೇ ಆರೋಪಿ ತನ್ನ ಅತ್ತೆ. 1 ನೇ ಆರೋಪಿ ತನ್ನನ್ನು ದಿನಾಂಕ 31.03.2021 ರಂದು ಮದುವೆಯಾಗಿರುತ್ತಾರೆ. ಮದುವೆಯಾದ ನಂತರ ತಾನು ತನ್ನ ಗಂಡನ ಮನೆಯಲ್ಲಿ ವಾಸವಾಗಿರುತ್ತೇನೆ. ತನ್ನ ಮತ್ತು 1 ನೇ ಆರೋಪಿಯ ನಡುವೆ ಸಣ್ಣಪುಟ್ಟ ಮನಸ್ತಾಪವಾಗಿ, ಆ ಬಗ್ಗೆ ಪೊಲೀಸರಿಗೆ ಮೌಖಿಕವಾಗಿ ತಿಳಿಸಿದ್ದು, ಆರೋಪಿಯನ್ನು ಪೊಲೀಸ್

ಠಾಣೆಗೆ ಕರೆಸಿ ಬುದ್ದಿವಾದ ಹೇಳುವಂತೆ ಪೊಲೀಸರಿಗೆ ಕೋರಿಕೊಂಡಿರುತ್ತೇನೆ. ಆರೋಪಿಗಳು ತನಗೆ ಅವಾಚ್ಯವಾಗಿ ಬೈದಿಲ್ಲ, ಹೆಚ್ಚಿನ ವರದಕ್ಷಿಣೆ ತರುವಂತೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿಲ್ಲ, ತನ್ನನ್ನು ಅವಾಚ್ಯವಾಗಿ ಬೈದಿಲ್ಲ ಹಾಗೂ ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಹಾಕಿಲ್ಲ. ಆ ರೀತಿ ತಾನು ಯಾವುದೇ ದೂರನ್ನು ನೀಡಿರುವುದಿಲ್ಲ. ದೂರನ್ನು ನಿಪಿ.1 ಎಂದು, ಕೃತ್ಯ ನಡೆದ ಸ್ಥಳ ಮಹಜರ್ ಹಾಗೂ ಮದುವೆ ಆದ ಸ್ಥಳದ ಮಹಜರ್ ಗಳನ್ನು ನಿ.ಪಿ.2 ಮತ್ತು 3 ಎಂದು, ತಮ್ಮ ಸಹಿಗಳನ್ನು ನಿಪಿ.1(ಎ), ನಿಪಿ.2(ಎ) ಮತ್ತು ನಿಪಿ.3(ಎ) ಎಂದು ಗುರುತಿಸಲಾಗಿದೆ. ನಿಪಿ.2 ಮತ್ತು 3 ರಲ್ಲಿ ಬರೆದಿರುವ ವಿಷಯಗಳು ತನಗೆ ಗೊತ್ತಿರುವುದಿಲ್ಲ. ಪೊಲೀಸರೂ ಸಹ ಓದಿ ತಿಳಿಸಿರುವುದಿಲ್ಲ. ಪೊಲೀಸರು ತನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಹಾಗೂ ಯಾವುದೇ ದಾಖಲೆಯನ್ನು ವಶಪಡಿಸಿಕೊಂಡಿಲ್ಲ. ತಾನು ಯಾವುದೇ ಮರು ಹೇಳಿಕೆ ನೀಡಿಲ್ಲವೆಂದು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ.1 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀ ಸವಾಲು ಮಾಡಿರುತ್ತಾರೆ. ಪ್ರಾಸಾ.1 ರವರು ತಮ್ಮ ಪಾಟೀ ಸವಾಲಿನಲ್ಲಿ, ತಾನು ಮತ್ತು 1 ನೇ ಆರೋಪಿ ರಾಜೀ ಮಾಡಿಕೊಂಡು ಇಬ್ಬರು ಪರಸ್ಪರ ಒಪ್ಪಿ ವಿಚ್ಛೇದನ ಪಡೆಯಲು ಅರ್ಜಿ ಸಲ್ಲಿಸಿರುತ್ತೇವೆ ಎಂದರೆ ಸರಿ. ಹಾಗಾಗಿ ಈ ಕೇಸನ್ನು ನಡೆಸಲು

ಇಚ್ಛಿಸುವುದಿಲ್ಲವೆಂದು ಉತ್ತರಿಸಿರುತ್ತಾರೆ.

**11.** ಪ್ರಮುಖ ಸಾಕ್ಷಿದಾರರಾದ ಪ್ರಾಸಾ.1 ರವರೇ ಮಾನ್ಯ ಅಭಿಯೋಜನೆಯ ಪ್ರಕರಣವನ್ನು ಬೆಂಬಲಿಸದಿದ್ದ ಕಾರಣ, ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನ ಆಗದೇ ಇರುವುದರಿಂದ, ಉಳಿದ ಎಲ್ಲ ಸಾಕ್ಷಿಗಳನ್ನು ಕೈ ಬಿಡಲಾಯಿತು. ಹೀಗಾಗಿ, ಆರೋಪಿಗಳ ವಿರುದ್ದವಾಗಿ ಹೊರಿಸಿದ ಆರೋಪಗಳಿಗೆ ಯಾವುದೇ ಸಾಕ್ಷ್ಯವಿಲ್ಲದಿದ್ದರಿಂದ, ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿಯಲ್ಲಿನ ಆರೋಪಿಗಳ ಹೇಳಿಕೆಯನ್ನು ಸಹ ಕೈ ಬಿಡಲಾಯಿತು. ಆದ್ದರಿಂದ, ಆರೋಪಿಗಳನ್ನು ಶಿಕ್ಷಿಸಲು ಯಾವುದೇ ಸಾಕ್ಷ್ಯವಿರುವುದಿಲ್ಲ ಮತ್ತು ಆರೋಪಿಗಳು ಖುಲಾಸೆಗೊಳ್ಳಲು ಅರ್ಹರಿರುತ್ತಾರೆಂದು ಅಭಿಪ್ರಾಯಪಟ್ಟು, ಮಾನ್ಯ ಅಭಿಯೋಜನೆಯು ತಮ್ಮ ವಾದವನ್ನು ಪುಷ್ಠೀಕರಿಸಲು ವಿಫಲವಾಗಿದೆ ಎಂಬ ಅಭಿಪ್ರಾಯದ ಮೇರೆಗೆ, ನ್ಯಾಯಾಲಯವು ಮೇಲಿನ 1 ರಿಂದ 5 ನೇ ಅಂಶಗಳನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

**ಅಂಶ-6 :-**

**12.** ಮೇಲಿನ ಅಂಶ-1 ರಿಂದ 5 ರಲ್ಲಿ ಚರ್ಚಿಸಿದ ಕಾರಣಗಳಿಂದ, ಈ ಕೆಳಕಂಡಂತೆ;

**<u>ಆದೇಶ</u>**

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1)ರಡಿ, ಆರೋಪಿಗಳನ್ನು ಭಾರತ ದಂಡ ಸಂಹಿತೆ ಕಲಂ.504, 498(ಎ), 506, 323 ಮತ್ತು 354(ಸಿ) ಸಹವಾಚಕ 34 ರಡಿಯಲ್ಲಿ ಆರೋಪಿಸಲಾದ ಶಿಕ್ಷಾರ್ಹ ಅಪರಾಧಗಳು ಸಾಬೀತಾಗಿಲ್ಲವೆಂದು ಪರಿಗಣಿಸಿ, ಬಿಡುಗಡೆ ಮಾಡಲಾಗಿದೆ.

ಆರೋಪಿಗಳ ಬಂಧಪತ್ರಗಳು ಮತ್ತು ಅವರ ಜಾಮೀನುದಾರರ ಬಂಧಪತ್ರಗಳು ಮುಂದಿನ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತವೆ.

*(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರವಾಗಿ ಉಕ್ತಲೇಖನ ನೀಡಿ, ನಂತರ ಅದು ನನ್ನಿಂದ ಪರಿಷ್ಕರಿಸಲ್ಪಟ್ಟು, ಈ ದಿನಾಂಕ **<u>08 ನೇ ಏಪ್ರಿಲ್ 2026</u>** ಇಸವಿಯಂದು ತೆರೆದ ನ್ಯಾಯಾಲಯದಲ್ಲಿ ಓದಲಾಯಿತು)*

Digitally signed by
YOGESH M R
Location: PRL.CIVIL
JUDGE AND JMFC.,
PERIYAPATNA.

**( ಯೋಗೇಶ ಎಂ.ಆರ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಪಿರಿಯಾಪಟ್ಟಣ.

**<u>-: ಅನುಬಂಧ :-</u>**

**<u>ಅಭಿಯೋಜನೆಯವರ ಪರ ಮಾಡಿಸಲಾದ ಸಾಕ್ಷಿಗಳ ಪಟ್ಟಿ :-</u>**

ಪ್ರಾಸಾ.1 - ಭಾಗ್ಯ ಬಿ.ಎಸ್

**<u>ಅಭಿಯೋಜನೆಯವರ ಪರವಾಗಿ ಪ್ರದರ್ಶಿಕೆ ಮಾಡಲಾದ ದಾಖಲೆಗಳು :-</u>**

| | | |
|---|---|---|
| ನಿಪಿ.1 | - | ದೂರು |
| ನಿಪಿ.1(ಎ) | - | ಪ್ರಾಸಾ.1 ರವರ ಸಹಿ |
| ನಿಪಿ.2 | - | ಸ್ಥಳ ಮತ್ತು ಅಮಾನತ್ತು ಮಹಜರ್ |
| ನಿಪಿ.2(ಎ) | - | ಪ್ರಾಸಾ.1 ರವರ ಸಹಿ |
| ನಿಪಿ.3 | - | ಸ್ಥಳ ಮಹಜರ್ |
| ನಿಪಿ.3(ಎ) | - | ಪ್ರಾಸಾ.1 ರವರ ಸಹಿ |
| ನಿಪಿ.4 | - | ಪ್ರಾಸಾ.1 ರವರ ಮುಂದುವರೆದ ಹೇಳಿಕೆ |

**<u>ಅಭಿಯೋಜನೆಯವರ ಪರ ಗುರುತಿಸಲಾದ ಮುದ್ದೆಮಾಲುಗಳು</u> : ಇಲ್ಲ**

**<u>ಆರೋಪಿಗಳ ಪರ ವಿಚಾರಣೆಯಾದ ಸಾಕ್ಷಿದಾರರು</u> : ಇಲ್ಲ**

**<u>ಆರೋಪಿಗಳ ಪರ ಪ್ರದರ್ಶಿಕೆ ಮಾಡಲಾದ ದಾಖಲೆಗಳು</u> : ಇಲ್ಲ**

Digitally signed by YOGESH M R
Location: PRL.CIVIL JUDGE AND JMFC., PERIYAPATNA.

**( ಯೋಗೇಶ ಎಂ.ಆರ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಪಿರಿಯಾಪಟ್ಟಣ.